MYSORE LEGISLATIVE ASSEMBLY

Tuesday, 27th June 1967.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Primary Health Centre at Ranebennur

*Q.—8. Sri N. L. BELLAD (Ranebennur).—

Will the Minister for Public Works be pleased to state :—

(*a*) whether plans and estimates in respect of Primary Health Centre building to be constructed in the I Development Block of Ranebennur have been prepared ;

(*b*) whether the buildings work would be started at least this year as there is dearth of buildings for the Hospital Staff ?

A.—Sri VEERENDRA PATIL (Minister for Public Works).—

(*a*) No. They are under preparation.

(*b*) The work will be taken up as soon as the estimate is administratively approved and technically sanctioned.

ಶ್ರೀ ಎನ್. ಎಲ್. ಬೆಲ್ಲದ.—ಸ್ವಾಮಿ, ರಾಣಿಬೆನ್ನೂರು ತಾಲ್ಲೂಕಿನ ಮೊದಲನ ಬ್ಲಾಕಿನ ಅವಧಿ ಅಕ್ಟೋಬರಿನಲ್ಲಿ ಪೂರ್ಣವಾಗುತ್ತದೆ. ಈ ಕಾರ್ಯಗಳಿಗೆ ಕೇಂದ್ರ ಸರ್ಕಾರದವರ ಕಾಂಟ್ರಿಬ್ಯೂಷನ್ ಇರುವುದರಿಂದ, ಇಷ್ಟರಲ್ಲೇ ಆ ಹಣವನ್ನು ಖರ್ಚು ಮಾಡಬೇಕಾಗಿರುವುದರಿಂದಲೂ ಇಲ್ಲದಿದ್ದರೆ ಅದು ಲ್ಯಾಪ್ಸ್ ಆಗುತ್ತಿರುವುದರಿಂದಲೂ, ಇದನ್ನು ತೀವ್ರವಾಗಿ ಖರ್ಚು ಮಾಡಲು ಸರ್ಕಾರದವರು ಕ್ರಮ ತೆಗೆದುಕೊಂಡಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈ ಕೆಲಸ ಪ್ರೈಮರಿ ಹೆಲ್ತ್ ಸೆಂಟರ್ ಯೂನಿಟ್ಟು ಆಗಬೇಕೆನ್ನುತಕ್ಕದ್ದು. ಇದರ ಪಟ್ಟಿ ಸರ್ಕಾರದಿಂದ ಬಂದಿರಲಿಲ್ಲ. ಆದರೆ ಈಗ ಬಂದಿದೆ. 10-3-67 ಅಂದರೆ ಮೊನ್ನೆ ಮೊನ್ನೆ ಬೇಕಾದಂತಹ ಪ್ಲಾನ್ಸ್ ಅಂಡ್ ಎಸ್ಟಿಮೇಟ್ಸ್ ತಯಾರು ಮಾಡಿ ಡೈರೆಕ್ಟರ್ ಆಫ್ ಹೆಲ್ತ್ ಸರ್ವಿಸಸ್ ಅವರಿಗೆ ಕಳಿಸಿದ್ದೇವೆ. ಅವರಿಂದ ಬಂದ ತಕ್ಷಣ ಕೆಲಸ ಪ್ರಾರಂಭಿಸುತ್ತೇವೆ.

ಶ್ರೀ ಎಲ್. ಶ್ರೀಕಂಠಯ್ಯ.—ಈ ಸಣ್ಣಪುಟ್ಟ ಕೆಲಸಗಳನ್ನು ಮಾಡಬೇಕಾದರೆ ಯಾರಾದರೂ ಒತ್ತಾಯ ತಂದಾಗ ತಾವು ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸುತ್ತೀರೋ ಅಥವಾ, ವರ್ಷಕ್ಕಿಂತ ಮುಂಚೆ, ಆಯಾ ಪರ್ಷದಲ್ಲಿ ಎಷ್ಟು ಕೆಲಸಗಳು ಆಗಬೇಕೆಂದು ಒಂದು ಪಟ್ಟಿ ಮಾಡಿಕೊಂಡು ಅದರಂತೆ ಮಾಡುತ್ತೀರೋ ?

ಶ್ರೀ ವೀರೇಂದ್ರ ಪಾಟೀಲ್.—ಆಯಾ ಇಲಾಖೆಯವರು ಅಂದರೆ ಆರೋಗ್ಯ ಇಲಾಖೆಯವರು ಯಾವ ಯಾವ ವರ್ಷದಲ್ಲಿ ಎಲ್ಲೆಲ್ಲಿ ಕಟ್ಟಡಗಳು ಆಗಬೇಕೆಂದು ಒಂದು ಪಟ್ಟಿ ಮಾಡಿ ಅಪ್ರೂವಲ್‌ಗೆ ಕಳುಹಿಸುತ್ತಾರೆ. ನಂತರ ನಾವು ಪ್ಲಾನ್ ಅಂಡ್ ಎಸ್ಟಿಮೇಟ್ ಮಾಡಿ ಡೈರೆಕ್ಟರ್ ಆಫ್ ಹೆಲ್ತ್ ಸರ್ವಿಸಸ್‌ಗೆ ಅಪ್ರೂವಲ್‌ಗೆ ಕಳುಹಿಸುತ್ತೇವೆ. ಅವರು ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟ ಮೇಲೆ ಕೆಲಸ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಮಾನ್ಯ ಮಂತ್ರಿಗಳು ಮೊನ್ನೆ ಮೊನ್ನೆ ತಾನೆ ಎಸ್ಟಿಮೇಟ್ ತಯಾರಾಯಿತು ಎಂದು ಹೇಳಿದರು. ಈ ರೀತಿ ಇದನ್ನು 5 ವರ್ಷಗಳ ಕಾಲ ತಡ ಮಾಡುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ನಾವು ತಡ ಮಾಡಿಲ್ಲ. 10-3-67ಕ್ಕೆ ಒಂದು ಪಟ್ಟಿ ತಯಾರಾಗಿದೆ. ಅದನ್ನು ಮೆಡಿಕಲ್ ಮತ್ತು ಪಬ್ಲಿಕ್ ಹೆಲ್ತ್ ಡಿಪಾರ್ಟ್‌ಮೆಂಟ್‌ನವರು ಅಪ್ರೂವ್ ಮಾಡಿದ ಮೇಲೆ ಗೌರ್ನಮೆಂಟ್ ಆರ್ಡರ್ ಇಷ್ಯೂ ಮಾಡಿದ್ದಾರೆ. ಈ ಪಟ್ಟಿಯಲ್ಲಿ ಈ ಕೆಲಸವೂ ಸೇರಿದೆ. ಈಗ ನಾವು ಪ್ಲಾನ್ ಅಂಡ್ ಎಸ್ಟಿಮೇಟ್‌ಗಳನ್ನು ಮಾಡಿ ಡೈರೆಕ್ಟರ್ ಆಫ್ ಹೆಲ್ತ್ ಸರ್‌ವಿಸಸ್ ಅವರ ಮುಂಜೂರಾತಿಗೆ ಕಳುಹಿಸಿದ್ದೇವೆ.

Sri C. K. RAJAIAH SHETTY.—May I know whether there are type design for such buildings ?

Sri VEERENDRA PATIL.—Yes, Sir.

Sri C. K. RAJAIAH SHETTY.—Then where is the question of making plans and estimates ?

Sri VEERENDRA PATIL.—Even if there is a type design, it is necessary for us to prepare plans and estimates because much depends upon the terrain and the foundation that we are going to lay ; if any changes are necessary, they have to be made. This has been sanctioned very recently on 10th March 1967. We send the plans and estimates to the Director of Health Services for administrative approval. We are not authorised to take up any work unless it is administratively approved by the competent authority.

ಶ್ರೀ ಸಿದ್ದಯ್ಯ ಕಾಶೀಮಠ್.—1967-68ರಲ್ಲಿ ಹೊಸದಾಗಿ ಕಟ್ಟಡಗಳನ್ನು ಕಟ್ಟಬಾರದೆಂದು ಸರ್ಕಾರದವರು ತಿಳಿಸಿರುವುದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್.—ಸರ್ಕಾರದ ಅನುಮತಿ ಇಲ್ಲದೆ ಯಾವ ಕಟ್ಟಡಗಳನ್ನೂ ಕಟ್ಟಬಾರದೆಂದು ಸರ್ಕಾರದ ಆಜ್ಞೆ ಇದೆ. ಟೆಕ್ನಿಕಲ್ ಸ್ಯಾಂಕ್ಷನ್ ಆದಮೇಲೆ ಕೆಲಸ ಪ್ರಾರಂಭ ಮಾಡುವುದಕ್ಕೆ ಅನುಮತಿ ಕೊಡುತ್ತೇವೆ.

ಶ್ರೀ ಎನ್. ಎಲ್. ಬೆಲ್ಲದ.—ಈಗ ಮಾನ್ಯ ಸಚಿವರು ಹೇಳುವುದು, ಆರೋಗ್ಯ ಇಲಾಖೆಯವರು ಕೆಲಸ ಪ್ರಾರಂಭ ಮಾಡಬೇಕಾದರೆ ಆರ್ಥಿಕ ಇಲಾಖೆಯವರು ದುಡ್ಡು ಕೊಟ್ಟರೆತಾನೆ ಎಂದು. ಕೇಂದ್ರ ಸರ್ಕಾರದವರು ಕೊಟ್ಟಿರುವ ಹಣ ಅಕ್ಕೌಂಟ್‌ಬರ್‌ನಲ್ಲಿ ಲ್ಯಾಪ್ಸ್ ಆಗುತ್ತದೆ. ಆದ್ದರಿಂದ ಈ ಕೆಲಸವನ್ನು ತೆಗೆದುಕೊಂಡು ಆ ಅವಧಿಯೊಳಗೆ ಪ್ರಾರಂಭ ಮಾಡುವರೇ ?

ಶ್ರೀ ವೀರೇಂದ್ರ ಪಾಟೀಲ್.—ಪಿ.ಡಬ್ಲ್ಯು.ಡಿ. ಎಲ್ಲಾ ಇಲಾಖೆಗಳಿಗೂ ಬೇಕಾಗುವ ಕಟ್ಟಡಗಳನ್ನು ಕಟ್ಟುವ ಒಂದು ಏಜೆನ್ಸಿ. ಸಂಬಂಧಪಟ್ಟ ಇಲಾಖೆಯವರು ಯಾವ ಹಣ ಲ್ಯಾಪ್ಸ್ ಆಗುತ್ತದೆ, ಯಾವ ಹಣ ಲ್ಯಾಪ್ಸ್ ಆಗುವುದಿಲ್ಲ ಎಂದು ತಿಳಿದುಕೊಂಡು ನಮಗೆ ತಿಳಿಸಿದರೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ನಾನು ಮೇಲೆ ಹೇಳಿದಂತೆ ಇದಕ್ಕೆ 10-3-67ರಲ್ಲಿ ಸ್ಯಾಂಕ್ಷನ್ ಬಂದಿದೆ. ಪ್ಲಾನ್ ಅಂಡ್ ಎಸ್ಟಿಮೇಟನ್ನು ಮುಂಜೂರಾತಿಗೆ ಕಳುಹಿಸಿದ್ದೇವೆ. ಅವರು ಮುಂಜೂರಾತಿ ಕೊಟ್ಟ ತಕ್ಷಣ ಕೆಲಸ ಪ್ರಾರಂಭ ಮಾಡುತ್ತೇವೆ.

Mr. SPEAKER.—The difficulty of the Hon'ble Members is that they cannot follow what transpires between department and department. They want that the departments should mutually accommodate and get the information.

Sri VEERENDRA PATIL.—That is all right. How can I force any department to entrust the work to the P.W.D. ?

ಶ್ರೀ ಎನ್. ಎಲ್. ಬೆಲ್ಲದ.—ಆರೋಗ್ಯ ಇಲಾಖೆಗೆ ಇದು ಸಂಬಂಧಪಟ್ಟಿರುವುದರಿಂದ ಆರೋಗ್ಯ ಮಂತ್ರಿಗಳು ಇದರ ಬಗ್ಗೆ ಒಂದು ಕ್ಲಾರಿಫಿಕೇಷನ್ ಕೊಟ್ಟರೆ ಸೂಕ್ತವಾಗಿ ಕಂಡು ಬರುತ್ತದೆ.

ಅಧ್ಯಕ್ಷರು.—ಪ್ರಯತ್ನ ಮಾಡುತ್ತಾರೆ.

ಶ್ರೀ ಎಲ್. ಶ್ರೀಕಂಠಯ್ಯ.—ಹತ್ತು ಹದಿನೈದು ಸಾವಿರ ರೂಪಾಯಿ ಕೆಲಸ ತೆಗೆದುಕೊಳ್ಳುವ ಡಿಸ್ಟ್ರಿಕ್ಟ್ ಸರ್ಜನರಿ ಪವರ್ಸ್ ಎಗ್ಸಿಕ್ಯೂಟಿವ್ ಎಂಜಿನಿಯರ್ ಹಾಗು ಸೂಪರಿಂಟೆಂಡಿಂಗ್ ಎಂಜಿನಿಯರ್‌ಗಳಿಗೆ ಇದ್ದರೂ ಕೂಡ ಸರಕಾರದ ಅನುಮತಿ ಇಲ್ಲದೆ ಯಾವ ಕೆಲಸಕ್ಕೂ ಹಣ ಖರ್ಚುಮಾಡಕೂಡದು ಎಂದು ಏನಾದರೂ ವಿಧಾಯಕ ಮಾಡಿದ್ದೀರಾ ?

Mr. SPEAKER.—The member may better put a separate Question.

Sri C. K. RAJAIAH SHETTY.—What prevents you to take precautionary measures to prepare plans and estimates in advance to every plan and keep ready ?

Sri VEERENDRA PATIL.—There would not be any delay in preparing the plans and estimates because they will be prepared according to type design. That has been done very recently and forwarded to the Director General and as soon as we get the administrative approval, we will start the work.

ಶ್ರೀ ಡಿ. ಎಸ್. ನಾಡಕರ್ಣಿ.—ಕೇಂದ್ರ ಸರಕಾರ ಕೊಡುವ ಹಣ ಆಕ್ಟೋಬರ್ ಒಂದನೇ ತಾರೀಖಿಗೆ ರ್ಯಾಪ್ಸ್ ಆಗುವುದರಿಂದ ಕ್ಯಾಬಿನೆಟ್ಟಿನಲ್ಲಿ ಎಲ್ಲ ಮಂತ್ರಿಗಳೂ ಸೇರಿ ಒಬ್ಬರಿಗೊಬ್ಬರು ಸಮಾಲೋಚನೆ ಮಾಡುವುದು ಯೋಗ್ಯ ಕಾಣುವುದಿಲ್ಲವೇ ?

Mr. SPEAKER.—It is a matter for debate.

ಶ್ರೀ ಎನ್. ಚಿಕ್ಕೇಗೌಡ.—ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಆಗಿರತಕ್ಕಂಥ ಕೆಲಸಗಳ ಸ್ಕೇಜ್ ಒಂದು ಕೆಲಸ ಪೂರ್ತಿ ಕಾರ್ಯಗತ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಸ್ಕೇಜ್ ಒಂದು ಪೂರ್ತಿ ಮಾಡುವುದು ನನಗೆ ಸಂಬಂಧವಿಲ್ಲ. ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗಿ ಬಂದ ಕೆಲಸಗಳನ್ನು ತಕ್ಷಣ ಪ್ರಾರಂಭ ಮಾಡುತ್ತೇವೆ.

Feeding Boranakanive Tank

*Q.—32. Sri B. GANGANNA (Kallambella).—

Will the Minister for Public Works be pleased to state :—

(*a*) whether there is any proposal of feeding Yagachi River Water to Boranakanive Tank in Chicknayakanahally Taluk ;

(*b*) if not, whether the Government would include the proposal of feeding Yagachi River Water to Boranakanive Tank by giving a branch Channel from the Feeder of Vanivilasa Sagar in Hiriyur Taluk on the Gayathri Reservoir ?

A.—Sri VEERENDRA PATIL (Minister for Public Works).—

(*a*) No.

(*b*) The Proposal is not feasible.